ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಪುರಸಭೆಗಳಿಗೆ ಬಿಡುಗಡೆ ಮಾಡಲಾದ ಅನುದಾನ

263 (474) ಶ್ರೀ ಖಾದರ್ ಯು.ಟಿ. (ಮಂಗಳೂರು):– ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ಪುರಸಭೆಗಳಿಗೆ ಬಿಡುಗಡೆ ಮಾಡಲಾದ ಅನುದಾನವೆಷ್ಟು; ವಿವಿಧ ಯೋಜನಾವಾರು ವಿವರ ಒದಗಿಸುವುದು;

ಆ) ಎಸ್‌ಎಫ್‌ಸಿ ಯೋಜನೆಯ ಅನುದಾನ ಇದುವರೆವಿಗೂ ಬಿಡುಗಡೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಉಳ್ಳಾಲ ಪುರಸಭೆಗೆ ಈ ವರ್ಷ ಎಷ್ಟು ಹಣವೆನ್ನು ಬಿಡುಗಡೆ ಮಾಡಲಾಗಿದೆ? (ವಿವರ ಒದಗಿಸುವುದು);

ಶ್ರೀ ಬಾಲಚಂದ್ರ ಜಾರಕಿಹೋಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು):–

ಅ) 2011–12ನೇ ಸಾಲಿನಲ್ಲಿ ಪರಸಭೆಗಳಿಗೆ ಈ ಕೆಳಕಂಡ ಯೋಜನೆಗಳಡಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ.

ಎಸ್.ಎಫ್.ಸಿ. ಮುಕ್ತನಿಧಿ	...	ರೂ. 7745.03 ಲಕ್ಷಗಳು
13ನೇ ಹಣಕಾಸು	...	ರೂ. 2821.10 ಲಕ್ಷಗಳು
ಸಿಎಂಎಸ್ ಎಂ.ಟಿ.ಡಿ.ಪಿ.	...	ರೂ. 7498.01 ಲಕ್ಷಗಳು

ಆ) ಇಲ್ಲ

ಇ) ಉಳ್ಳಾಲ ಪುರಸಭೆಗೆ ಈ ವರ್ಷ ಒಟ್ಟು ರೂ. 177.75 ಲಕ್ಷಗಳು ಬಿಡುಗಡೆಯಾಗಿದ್ದು, ವಿವರ ಈ ಕೆಳಗಿನಂತಿದೆ.

ಎಸ್.ಎಫ್.ಸಿ. ಮುಕ್ತನಿಧಿ	...	ರೂ. 144.61 ಲಕ್ಷಗಳು
13ನೇ ಹಣಕಾಸು	...	ರೂ. 033.14 ಲಕ್ಷಗಳು